ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 3, Nov-Dec 2020, 141-148
©*IIMRD*, Mysuru
IIMRD JOURNALS
www.iimrd.com

# ತ್ರಿವೇಣಿಯವರ ಆಯ್ದ ಕಾದಂಬರಿಗಳಲ್ಲಿ ಸ್ತ್ರೀಶಿಕ್ಷಣ

**ಮೀನಾಕ್ಷಿ**[1]

**ಪೀಠಿಕೆ**

ಪ್ರಕೃತಿಯಲ್ಲಿ ಪ್ರತಿಯೊಂದು ಜೀವಿಯು ತನ್ನದೇಯಾದ ಗುಣಸ್ವಭಾವವನ್ನೊಳಗೊಂಡಿದೆ. ಇತರ ಪ್ರಾಣಿಗಳಿಗೆ ಹೋಲಿಸಿದಾಗ ಮನುಷ್ಯ ತನ್ನದೇ ವ್ಯಕ್ತಿತ್ವ ರೂಪಿಸಿಕೊಂಡು ವಿಭಿನ್ನವಾಗಿ ನಿಲ್ಲುತ್ತಾನೆ. ಆದರೆ ಅದೇ ಮಾನವ ಕುಲಕ್ಕೆ ಸೇರಿದ ಸ್ತ್ರೀಯರನ್ನು ಎಲ್ಲಾ ಕ್ಷೇತ್ರಗಳಿಂದ ದೂರವಿಟ್ಟಿರುವಂತೆ ಶಿಕ್ಷಣದಿಂದಲೂ ಕೂಡ ವಂಚಿತರನ್ನಾಗಿಸಿದೆ. ಸ್ತ್ರೀಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಬಲಳಾಗಲು ಅವಕಾಶವಿಲ್ಲದಂತೆ ತಡೆಹಿಡಿಯಲಾಗಿದೆ. ವೇದಗಳ ಕಾಲದಲ್ಲಿ ಮೇಲ್ವರ್ಗದ ಸ್ತ್ರೀಯರಿಗೆ ಮಾತ್ರ ಶಿಕ್ಷಣ ಪಡೆಯಲು ಅವಕಾಶವಿದ್ದ ವಿಚಾರಗಳಿವೆ. ಲೋಪಾಮುದ್ರ, ನಿವಾವರಿ, ಇಂದ್ರಾಣಿ, ಅಪಲಾ, ವಿಶ್ವಾವರ ಮೊದಲಾದವರು ಶಿಕ್ಷಣ ಪಡೆದು ಪಾಂಡಿತ್ಯವುಳ್ಳ ಸ್ತ್ರೀಯರಾಗಿದ್ದರು. ಸಾಮಾನ್ಯ ವರ್ಗದ ಸ್ತ್ರೀಯರು ಶಿಕ್ಷಣದಿಂದ ದೂರ ಉಳಿದಿದ್ದರು. ಆ ನಂತರದ ಕಾಲಘಟ್ಟದಲ್ಲಿ ಸ್ತ್ರೀಯರಿಗೆ ಗೃಹಕೃತ್ಯಗಳಲ್ಲಿ ತೊಡಗುವ ಮೂಲಕ ಆಕೆಯ ಜೀವನ ಕುಟುಂಬ ನಿರ್ವಹಣೆಗಷ್ಟೇ ಸೀಮಿತವಾಯಿತು. 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂದು ಮನುಸ್ಮೃತಿಯಲ್ಲಿ ಹೇಳಿ ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಾದವರಲ್ಲ. ಆಕೆ ಬಾಲ್ಯದಲ್ಲಿ ತಂದೆಯ ಪೋಷಣೆಯಲ್ಲಿ, ಯೌವನದಲ್ಲಿ ಪತಿಯ ಮತ್ತು ಮುಪ್ಪಿನಲ್ಲಿ ತನ್ನ ಮಕ್ಕಳ ಪೋಷಣೆಯಲ್ಲಿರಬೇಕಾದವಳು ಎನ್ನುವ ಮೂಲಕ ಸ್ತ್ರೀಯರ ಸ್ವಾತಂತ್ರ್ಯ ಹರಣವಾಯಿತು. ಹಾಗಾಗಿಯೇ, ಬಾಲ್ಯವಿವಾಹ, ವರದಕ್ಷಿಣೆ, ಸತಿಪದ್ಧತಿ, ದೇವದಾಸಿ ಪದ್ಧತಿ, ವಿಧವಾ ಸಮಸ್ಯೆ ಮುಂತಾದ ಆಚರಣೆಗಳು ಜಾರಿಗೆ ಬಂದು ಸ್ತ್ರೀಯರು ಶೋಷಣೆಗೊಳಗಾಗಬೇಕಾಯಿತು.

ಮುಸ್ಲಿಂ ಆಕ್ರಮಣದ ನಂತರದ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನ ತೀರ ಹೀನಾಯ ಸ್ಥಿತಿಗಿಳಿಯಿತು. ಬ್ರಿಟೀಷರ ಆಗಮನದ ಕಾಲಘಟ್ಟದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಲಾಯಿತು. ಇದರಲ್ಲಿ ಭಾರತೀಯರು ಕೂಡ ಪ್ರಮುಖ ಪಾತ್ರವಹಿಸಿದರು. ರಾಜಾರಾಮ್ ಮೋಹನ್‌ರಾಯ್, ಈಶ್ವರಚಂದ್ರ ವಿದ್ಯಾಸಾಗರ, ದಯಾನಂದ ಸರಸ್ವತಿ, ಮಹರ್ಷಿ ಕರ್ವೆ, ಜ್ಯೋತಿಬಾಫುಲೆ, ಸಾವಿತ್ರಿಬಾಯಿಫುಲೆ ಮುಂತಾದ ಸಮಾಜ ಸುಧಾರಕರ ಪರಿಶ್ರಮದಿಂದಾಗಿ ಮಹಿಳಾ ಶಿಕ್ಷಣಕ್ಕೆ ಅವಕಾಶ ದೊರೆಯಿತು. ಸ್ವಾತಂತ್ರ್ಯನಂತದ ಮಹಿಳಾ ಶಿಕ್ಷಣದ ಕ್ಷೇತ್ರದಲ್ಲಿ ಹಂತಹಂತವಾಗಿ ಸುಧಾರಣೆ ಹೊಂದಿದ್ದರಿಂದಾಗಿ ಸ್ತ್ರೀಯರು ಶಿಕ್ಷಣ ಪಡೆಯುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸ್ವಾವಲಂಬಿಯಾಗಿರಲು ಸಾಧ್ಯವಾಯಿತು.

---

[1]*ಸಂಶೋಧನಾ ವಿದ್ಯಾರ್ಥಿನಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.*

ಈ ಸುಧಾರಣಾ ಪ್ರಕ್ರಿಯೆಯಿಂದಾಗಿ ಹಲವಾರು ಸ್ತ್ರೀಯರು ಶಿಕ್ಷಣ ಪಡೆದುದಲ್ಲದೆ ಬರವಣಿಗೆಯಲ್ಲಿ ತೊಡಗಿಸಿಕೊಂಡು ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸಿದರು. ಶಿಕ್ಷಣ ಪಡೆಯಲು ಇದ್ದಂತಹ ತೊಡಕುಗಳು, ಶಿಕ್ಷಣ ಪಡೆದಾದ ಆನಂತರದ ಸಾಮಾಜಿಕ ದೃಷ್ಟಿಕೋನಗಳು, ಶಿಕ್ಷಣ ಪಡೆದ ಮಹಿಳೆಯರ ಪ್ರಬುದ್ಧತೆ ಮುಂತಾದವುಗಳ ತಮ್ಮ ಬರವಣಿಗೆಯ ಮೂಲಕ ಸಾದರಪಡಿಸಿದರು. ಶಾಂತಾಬಾಯಿ ನೀಲಗಾರ, ನಂಜನಗೂಡು ತಿರುಮಲಾಂಬ, ಆರ್.ಕಲ್ಯಾಣಮ್ಮ, ಎಂ.ಕೆ.ಇಂದಿರಾ, ಅನುಪಮಾ ನಿರಂಜನ, ಗೀತಾನಾಗಭೂಷಣ, ತ್ರಿವೇಣಿ ಮುಂತಾದವರು ಕಾದಂಬರಿಗಳ ಮೂಲಕ ಸ್ತ್ರೀ ಸಬಲೀಕರಣದ ವಿಚಾರಗಳನ್ನು ಪ್ರಸ್ತುತಪಡಿಸಿದ್ದಾರೆ. ತ್ರಿವೇಣಿಯವರು ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಪ್ರಮುಖರಾದವರು. ಮಹಿಳಾ ಕೇಂದ್ರಿತವಾದ ವಿಚಾರಗಳನ್ನು ಪ್ರಸ್ತಾಪಿಸುವ ಮೂಲಕ ಸ್ತ್ರೀ ಶಿಕ್ಷಣ, ಉದ್ಯೋಗಸ್ಥ ಮಹಿಳೆರ ಸ್ಥಾನಮಾನ, ವಿಧವಾ ವಿವಾಹ ಮುಂತಾದ ಪ್ರಗತಿಪರವಾದ ವಿಷಯಗಳನ್ನು ಜನರಿಗೆ ಮನಮುಟ್ಟುವ ರೀತಿಯಲ್ಲಿ ಬಿತ್ತರಿಸಿದ್ದಾರೆ.

'ಅಪಸ್ವರ' ಮತ್ತು 'ಅಪಜಯ' ಎಂಬ ಕಾದಂಬರಿಗಳಲ್ಲಿ ಶಿಕ್ಷಣದ ಮಹತ್ವವನ್ನು ನಿರೂಪಿಸಿದ್ದಾರೆ. ವಿದ್ಯೆಯ ಅಗತ್ಯತೆ ಜೀವನದಲ್ಲಿ ತುಂಬಾ ಮುಖ್ಯವಾದುದು ಎಂಬುದನ್ನು ತಿಳಿಸುವ ಮೂಲಕ ಹೆಣ್ಣು ಎಂದರೆ ವಿವಾಹವಾಗಿ ಮಕ್ಕಳನ್ನು ಹೆತ್ತು ತನ್ನ ಅಸ್ತಿತ್ವವೇ ಇಲ್ಲದಂತೆ ಗಂಡನ ಮಡದಿಯಾಗಿರುವುದಷ್ಟೇ ಅಲ್ಲ ಅದರ ಜೊತೆಗೆ ದಾಂಪತ್ಯದಲ್ಲಿ ಗೆಳೆತನದಿಂದ ಪರಸ್ಪರರ ಅಭಿರುಚಿಗಳನ್ನು ಗೌರವಿಸುವ ಮೂಲಕ ಆದರ್ಶಯುತವಾಗಿ ಜೀವನ ನಡೆಸುವುದು ಮುಖ್ಯವೆಂಬುದು ಇಲ್ಲಿ ಪ್ರತಿಪಾದಿತವಾಗಿದೆ. ಈ ಅವಳಿ ಕಾದಂಬರಿಗಳ ನಾಯಕಿ ಮೀರಾ ವಿದ್ಯಾವಂತಳು, ವೈದ್ಯೆಯಾಗಬೇಕೆಂಬ ಮಹಾದಾಸೆಯನ್ನು ಹೊಂದಿ ಮೊದಲಿನಿಂದಲೂ ಓದಿನಲ್ಲಿ ವಿಶೇಷವಾದ ಆಸಕ್ತಿಯಿದ್ದವಳಿಗೆ ವಿವಾಹ ಜೀವನ ಇಷ್ಟವಿಲ್ಲದಿದ್ದರೂ ಶಾಮುವಿನೊಡನೆ ವಿವಾಹವಾಗುತ್ತದೆ. ಸಂಸಾರದಲ್ಲಿ ಆಸಕ್ತಿಯಿಲ್ಲದಿದ್ದರೂ ವೀಣಾ ಎಂಬ ಮಗುವಿನ ಜನನ ಸಂತೋಷವನ್ನುಂಟು ಮಾಡಿ ಅಲ್ಪದಿನಗಳಲ್ಲೇ ಆ ಮಗು ಆಕಸ್ಮಿಕವಾಗಿ ಮರಣವನ್ನಪ್ಪಿ ವೈವಾಹಿಕ ಜೀವನದಲ್ಲಿ ತಲ್ಲಣವನ್ನುಂಟು ಮಾಡುತ್ತದೆ. ವಾಸ್ತವ ಸ್ಥಿತಿಯನ್ನು ಅರಿತು ಸಹಜ ಸ್ಥಿತಿಗೆ ಮರಳಿದಾಗ ವಿದ್ಯೆಯ ಮುಂದುವರಿಕೆಯೇ ನೆಮ್ಮದಿಯ ಮಾರ್ಗವೆಂದು ನಿರ್ಧರಿಸಿ ವೈದ್ಯೆಯಾಗಿ ಜನಸೇವೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಕಲಿಯಲು ಹೊರಟ ಈಕೆಗೆ ಎಲ್ಲರೂ ಟೀಕಿಸುವರು. ಆಗ ಶಿಕ್ಷಣಕ್ಕೆ ತನ್ನದೇ ಆದ ಮಹತ್ವವಿದೆ. ತಾರತಮ್ಯವಿಲ್ಲ, ತಮ್ಮನ್ನು ಸ್ವಾಭಿಮಾನಿಯನ್ನಾಗಿ, ಸ್ವಾವಲಂಬಿಯಾಗಿ ರೂಪಿಸಿ ಸಹಿಷ್ಣುತಾಭಾವ ಬೆಳೆಸಿಕೊಳ್ಳುವಲ್ಲಿ ವಿದ್ಯೆ ಸಹಕಾರಿಯಾದುದು ಎಂಬುದನ್ನು ಮೀರಾಳ ಪಾತ್ರ ಸಾದರಪಡಿಸುತ್ತದೆ. ಮೆಡಿಕಲ್ ಓದಲು ಸಂದರ್ಶನದಲ್ಲಿ ಪಾಲ್ಗೊಂಡಾಗ ಅವರು ಕೇಳಿದ ಪ್ರಶ್ನೆಗೆ ಮೀರಾ "ಸರ್ಕಾರಿ ಕೆಲಸದ ಹಂಬಲವಿಲ್ಲ. ಹಳ್ಳಿಗೆ ಹಿಂತಿರುಗಿ ನಮ್ಮ ರೈತರ ಸೇವೆ ಮಾಡುವ ಹಂಬಲವಿದೆ"[1] ಎಂದು ಹೇಳುವ ಮೂಲಕ ತಾನು ವೈದ್ಯಳಾಗಬೇಕೆಂಬುದರ ಹಿಂದೆ ಇರುವ ಮಹತ್ವದ ಕಾರಣವನ್ನು ತಿಳಿಸುವುದ ಮೆಚ್ಚುಗೆಗೆ ಪಾತ್ರವಾಗಿದೆ.

ಮೀರಾ ತನ್ನ ಕನಸು ಮುಗಿಯುತ್ತದೆಯೊ ಎಂಬ ಆತಂಕವನ್ನು ದೂರ ಮಾಡಿ ವ್ಯಾಸಂಗದಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ನಾಟಕ ಮುಂತಾದವುಗಳಲ್ಲಿ ಭಾಗವಹಿಸಿ ನೋವನ್ನು ಮರೆಯಲು ಸಹಕಾರಿಯಾದುದು ಶಿಕ್ಷಣ. ಸುವರ್ಣ ದಿನಗಳನ್ನಾಗಿ ಮಾರ್ಪಡಿಸಿಕೊಳ್ಳುವ ಶಕ್ತಿ ಇರುವುದು ಶಿಕ್ಷಣಕ್ಕೆ

ಮಾತ್ರವೆಂಬುದು ಈ ಪಾತ್ರದ ಮೂಲಕ ಮನನವಾಗುತ್ತದೆ. ತನ್ನ ಸ್ನೇಹಿತರಾದ ವಿಜಯ ಮತ್ತು ಗೋಪಿಯವರ ವಿವಾಹಕ್ಕೆ ಅವರ ಮನೆಗಳಲ್ಲಿ ವಿರೋಧಿಸಿದಾಗ, ಸಮಾಜದಲ್ಲಿ ಎಲ್ಲರೂ ಸಮಾನರು ಎಂದು ಹೇಳಿ ತನ್ನ ಹಳ್ಳಿಯಲ್ಲಿಯೇ ವಿವಾಹವನ್ನು ಏರ್ಪಡಿಸಿ ನೆರವೇರಿಸುತ್ತಾಳೆ. ಅವಳ ಈ ಪ್ರಬುದ್ಧತೆಗೆ ಅವಳ ಶೈಕ್ಷಣಿಕ ಕಾರ್ಯಚಟುವಟಿಕೆಯೇ ಕಾರಣವಾಗಿರುವಂತದು. ಅಂದಿನಿಂದಲೂ ಸ್ತ್ರೀಯರಿಗೆ ಮಾನಸಿಕವಾಗಿ ಧೈರ್ಯ ಸ್ಥೈರ್ಯ ತುಂಬಿ ಎಲ್ಲರ ಏಳಿಗೆಗೆ ಸಹಕಾರಿಯಾಗಿ ನಿಂತಿರುವುದು ಪ್ರಮುಖವಾದುದು. ಮೀರಾ ವೈದ್ಯಳಾಗಿ ತನ್ನ ಗ್ರಾಮಕ್ಕೆ ಹಿಂತಿರುಗಿ ಬಂದು ಅವಳ ಹಣದಲ್ಲೇ ಔಷಧಿಗಳನ್ನು ಖರೀದಿಸಿ ಜನರ ಕಾಯಿಲೆಗಳಿಗೆ ಚಿಕಿತ್ಸೆ ನೀಡಿ ಉಪಚರಿಸುವಂತಹ ಕೈಂಕರ್ಯವನ್ನು ಕೈಗೊಳ್ಳುತ್ತಾಳೆ. ಪಂಡಿತರಿಂದ ಮಾತ್ರ ಔಷಧಿ ಸ್ವೀಕರಿಸುತ್ತಿದ್ದ ಜನರು ಮೀರಾಳ ಚಿಕಿತ್ಸೆಗೆ ಹೊಂದಿಕೊಂಡರು. ಆಕೆ ವೈದ್ಯಳಾಗುತ್ತೇನೆ ಎಂದು ಹೇಳಿದ್ದಾಗ ಟೀಕೆ ಮಾಡುತ್ತಿದ್ದಂತಹ ಜನರೇ ಈಗ ಅವಳನ್ನು ಪ್ರಾಣದಾನ ಮಾಡುತ್ತಾ ಪುಣ್ಯದ ಕೆಲಸ ಮಾಡುತ್ತಿದ್ದೀರಿ ಎಂದು ಪ್ರಶಂಸೆ ಮಾತುಗಳನ್ನಾಡಿ ಗೌರವಿಸುತ್ತಾರೆ. ಜನರು ಬಡತನ, ಸಾಮಾಜಿಕ ತುಳಿತಕ್ಕೊಳಗಾಗಿ ಬದುಕು ನಡೆಸುತ್ತಿರುವಾಗ ಅಧಿಕ ಮಕ್ಕಳಾಗುವುದು ಕೂಡ ಆರೋಗ್ಯಕ್ಕೆ ಹಾನಿಕಾರಕ ಮತ್ತು ಆ ಮಕ್ಕಳಿಗೆ ಸರಿಯಾದ ಆಹಾರ, ಉತ್ತಮ ಜೀವನವನ್ನು ರೂಪಿಸಲು ಅಸಾಧ್ಯವೆಂಬುದನ್ನು ಜನರಿಗೆ ಮನವರಿಕೆ ಮಾಡಿಸುವ ಮೀರಾ ತನ್ನ ಪರಿಶ್ರಮದಿಂದಲೇ ಜನರ ಸೇವೆ ಮಾಡುತ್ತ ವೃತ್ತಿ ಗೌರವವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಾ ಮಾದರಿಯಾಗಿ ನಿಲ್ಲುತ್ತಾಳೆ. ತ್ರಿವೇಣಿಯವರು ಈ ಕಾದಂಬರಿಗಳಲ್ಲಿ ಹೆಣ್ಣಿಗೆ ವಿವಾಹವೇ ಜೀವನದಲ್ಲಿ ಬಹುಮುಖ್ಯವಾದುದು ಮತ್ತು ಪತಿ ಸೇವೆಯೊಂದೆ ಅವಳ ಗುರಿ ಹಾಗೂ ಧ್ಯೇಯವೆಂಬುದನ್ನು ವೈಭವೀಕರಿಸಿ ಹೇಳಿಲ್ಲ. ಪ್ರಬುದ್ಧವಾಗಿ ಚಿಂತಿಸಿ ವೈವಾಹಿಕ ಜೀವನದಲ್ಲಿ ಸೋತರೂ ಮತ್ತೊಂದು ದಾರಿಯನ್ನು ಕಂಡುಕೊಳ್ಳುವ ಮೂಲಕ ವೈದ್ಯವೃತ್ತಿಯನ್ನು ನಿರ್ವಹಿಸಿ ಅದೇ ದಾರಿಯಲ್ಲಿ ಮುನ್ನಡೆಯುವ ಪಾತ್ರವಾಗಿ ಮೀರಾ ವಿಭಿನ್ನ ನಿಲುವಿನ ಸ್ತ್ರೀಯಾಗಿ ಮನದಲ್ಲಿ ಉಳಿಯುತ್ತಾಳೆ.

'ಮುಕ್ತಿ' ಮತ್ತು 'ಕಂಕಣ' ಕಾದಂಬರಿಗಳಲ್ಲಿ ಐವತ್ತರ ದಶಕದಲ್ಲಿ ಶಿಕ್ಷಣ ಪಡೆದ ಸ್ತ್ರೀಯರು ಎದುರಿಸಬೇಕಾಗಿದ್ದ ಅನೇಕ ತೊಂದರೆಗಳನ್ನು ಕುರಿತು ಚರ್ಚಿಸಿದ್ದಾರೆ. ವಿದ್ಯಾವಂತೆಯರಾದವರಿಗೆ ವಿವಾಹವಾಗುವುದು ಕಷ್ಟವಾಗುತ್ತಿತ್ತು. ಅಂದರೆ ವರ ಸಿಗದಿರುವ ತೊಂದರೆ, ಮದುವೆ ತಡವಾದಾಗ ಮನೆಯವರ ಆತಂಕ, ಸ್ತ್ರೀಯರು ಉದ್ಯೋಗವಂತರಾಗಿದ್ದರೆ ವರನ ಮನೆಯವರು ವಿರೋಧಿಸುವಂತದ್ದು, ಉದ್ಯೋಗಸ್ಥ ಮಹಿಳೆಯರ ಮೇಲೆ ಸಮಾಜದ ಕ್ರೂರ ನೋಟ, ಹೀಗೆ ಹಲವಾರು ತೊಂದರೆಗಳಿಂದ ಸ್ತ್ರೀಯರು ಅನುಭವಿಸುತ್ತಿದ್ದ ಕಷ್ಟಕಾರ್ಪಣ್ಯಗಳ ಜೊತೆಗೆ ಅವುಗಳನ್ನೆಲ್ಲಾ ಮೀರಿ ಶಿಕ್ಷಣ, ಉದ್ಯೋಗ ಪಡೆದು ಸಮಾಜದ ಟೀಕೆಗಳನ್ನು ಧೈರ್ಯವಾಗಿ ನಿಭಾಯಿಸಿ ಜೀವನ ನಡೆಸಿದ ಸ್ತ್ರೀಯರ ಚಿತ್ರಣ ಈ ಕಾದಂಬರಿಯಲ್ಲಿ ಮೂಡಿಬಂದಿರುವುದನ್ನು ಕಾಣಬಹುದು. ಈ ಕಾದಂಬರಿಯಲ್ಲಿ ಚಿತ್ರಿತವಾಗಿರುವ ಅಮೃತಾ, ರಮಾ, ಅಂಬಿಕ, ಕಸ್ತೂರಿ, ವೇದವಲ್ಲಿ, ಸುಶೀಲ ಮುಂತಾದವರೆಲ್ಲರೂ ವಿದ್ಯಾವಂತರಾಗಿದ್ದು, ತಮ್ಮ ಜೀವನ ರೂಪಿಸಿಕೊಳ್ಳುವಲ್ಲಿ ಶ್ರಮವಹಿಸಿದ ಏಳು–ಬೀಳಿನ ವಿಚಾರಗಳೆಲ್ಲವೂ ಪ್ರಸ್ತುತವೆನಿಸುತ್ತವೆ.

ಅಮೃತ ವಿದ್ಯಾವಂತೆಯಾಗಿದ್ದು ವಿವಾಹದ ಬಗ್ಗೆ ಆಸಕ್ತಿಯಿಲ್ಲದೆ ತನ್ನ ಕಾರಣದಿಂದಾಗಿ ತಮ್ಮಂದಿರ ವಿವಾಹಕ್ಕೆ ತೊಂದರೆಯಾಗಬಾರದೆಂದು ಮೊದಲು ಅವರ ವಿವಾಹವನ್ನೇ ನೆರವೇರಿಸಲು ಎಲ್ಲರನ್ನು

ಒಪ್ಪಿಸುತ್ತಾಳೆ. ಟೈಪಿಂಗ್ ತರಗತಿ ಸೇರಿ ಕಲಿತಾದ ಮೇಲೆ ಬೊಂಬಾಯಿಗೆ ಹೋಗಿ ನೆಲೆಸಿ ಅಲ್ಲಿ ಇಂಗ್ಲೀಷ್ ಪತ್ರಿಕೆಯ ಪ್ರೆಸ್ ಒಂದರಲ್ಲಿ ಟೈಪಿಸ್ಟ್ ಆಗಿ ಉದ್ಯೋಗಕ್ಕೆ ಸೇರಿ ತನ್ನ ಜೀವನವನ್ನು ರೂಪಿಸಿಕೊಳ್ಳುತ್ತಾಳೆ. ಮನೆಯವರೆಲ್ಲರ ವಿರೋಧದ ನಡುವೆಯು ಆಕೆ ಅವರೆಲ್ಲರ ಮನವೊಲಿಸಿ ಉದ್ಯೋಗಕ್ಕೆ ಸೇರುವಂತದ್ದು ಉದ್ಯೋಗಸ್ಥ ಮಹಿಳೆಯರ ಶೋಚನೀಯ ಸ್ಥಿತಿಯು ಇಂದಿಗೂ ಕನ್ನಡಿ ಹಿಡಿಯುವಂತೆ ಚಿತ್ರಿತವಾಗಿದೆ. ವೇದವಲ್ಲಿ ವಿದ್ಯಾವಂತೆಯಾದರೂ ತನ್ನ ದುಡುಕಿನ ನಿರ್ಧಾರದಿಂದಾಗಿ ಸಿತಾರ್ ಹೇಳಿಕೊಡುವ ಕ್ರಿಶ್ಚಿಯನ್ ಸಮುದಾಯದ ಸಲ್ದಾನಾ ನೊಡನೆ ಪಲಾಯನ ಮಾಡುತ್ತಾಳೆ. ಅವನೊಡನೆ ಉತ್ತಮ ಜೀವನದ ನಿರೀಕ್ಷೆಯಲ್ಲಿದ್ದ ಅವಳಿಗೆ ಆತ ವಿರುದ್ಧವಾದವನಾಗಿರುತ್ತಾನೆ. ಉದ್ಯೋಗ ಮಾಡದೆ ಈಕೆಯು ಗಳಿಸಿದ ಹಣದಲ್ಲೇ ಮದ್ಯವ್ಯಸನಿಯಾಗಿ ಜೀವನ ಸಾಗಿಸುವಂತದ್ದು ಜವಾಬ್ದಾರಿಯಿಲ್ಲದ ಅವನ ವ್ಯಕ್ತಿತ್ವವನ್ನು, ಕ್ರೂರತನವನ್ನು ತೋರುತ್ತದೆ. ಜೀವನದಲ್ಲಿ ವಿದ್ಯಾವಂತೆಯಾದರೂ ಸರಿಯಾದ ನಿರ್ಧಾರ ತೆಗೆದುಕೊಳ್ಳುವಲ್ಲಿ ವಿಫಲಳಾಗಿದ್ದು ಎಚ್ಚರ ತಪ್ಪಿದ ಮನಸ್ಥಿತಿಯ ಅನಾವರಣವಾಗುತ್ತದೆ. ಕಲಿತ ವಿದ್ಯೆಗೆ ಪರಿಪೂರ್ಣತೆ ಎಂಬುದು ದೊರೆಯಬೇಕಾದರೆ ಸವಾಲುಗಳು ಎದುರಾಗುವಂತದ್ದು ಸಹಜ. ಅದನ್ನು ಜಯಿಸಿ ಜೀವನ  ಉತ್ತಮವಾಗಿಸಿಕೊಳ್ಳುವಲ್ಲಿ ಶ್ರಮವಹಿಸಬೇಕಾಗುತ್ತದೆ. ಮುಂದೆ ವೇದವಲ್ಲಿ ಉದ್ಯೋಗಕ್ಕೆ ಸೇರಿ ತನ್ನ ಜೀವನಸಾಗಿಸುವಿಕೆಯ ದಾರಿಯನ್ನು ಕಂಡುಕೊಳ್ಳುತ್ತಾಳೆ. ಈ ಕಾದಂಬರಿಯ ಒಂದೊಂದು ಪಾತ್ರವು ಕೂಡ ವಿಭಿನ್ನ ಮುಖಗಳ ಪರಿಚಯ ಮಾಡುತ್ತಾ ಸಾಗುತ್ತದೆ. ಇದರಲ್ಲಿ ರಮೆಯೆಂಬ ಪಾತ್ರ ಪ್ರಮುಖವಾದುದು. ವಿದ್ಯಾವಂತೆಯಾಗಿ ಉದ್ಯೋಗವನ್ನು ಗಳಿಸಿಕೊಂಡು ಸಂಸಾರ ಜವಾಬ್ದಾರಿಯನ್ನು ಹೊತ್ತು ಕುಟುಂಬಕ್ಕಾಗಿ ತ್ಯಾಗಮಯಿಯಾದ ಆಕೆಯ ವಿಚಾರ ಮನಮುಟ್ಟುತ್ತದೆ.

ರಮೆಯು ಕುಟುಂಬಕ್ಕಾಗಿ ಕಂಕಣಬದ್ಧಳಾಗಿ ನಿಲ್ಲುವಂತಹ ಧೈರ್ಯವಂತ ಹೆಣ್ಣುಮಗಳು. ಮಗಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಿದ್ದ ತಂದೆಯ ಮರಣ ರಮೆಯ ಜೀವನವನ್ನೆ ಬದಲಿಸುತ್ತದೆ. ಜವಾಬ್ದಾರಿಯನ್ನು ಹೊತ್ತು ತಾಯಿ, ಸಹೋದರಿಯರು, ಸಹೋದರರ ಭವಿಷ್ಯವನ್ನು ಉತ್ತಮವಾಗಿ ರೂಪಿಸುವ ಆಲೋಚನೆ ಮಾಡಿರುತ್ತಾಳೆ. ಉತ್ತಮ ಸಂಗಾತಿ ಸಿಕ್ಕರೆ ಜೀವನ ನಿಭಾಯಿಸಬಹುದೆಂಬ ಆಸೆಯ ಜೊತೆಗೆ ಒಂದು ವೇಳೆ ಸಿಗದೆ ಹೋದರೆ ಕನ್ಯೆಯಾಗಿಯೇ ಉಳಿಯುವಂತಹ ದೃಢನಿರ್ಧಾರವನ್ನು ಮಾಡಿರುತ್ತಾರೆ. ಸ್ನೇಹಿತೆಯರು ವಿವಾಹದ ಬಗ್ಗೆ ಮಾತನಾಡಿದರು ಕೂಡಾ ಅವಳಿಗೆ ಮದುವೆಯ ಯಾವುದೇ ಏರ್ಪಾಟಿನ ಬಗ್ಗೆ ಅರಿವಿರುವುದಿಲ್ಲ. “ರಮಾಗೆ ಆ ಅನುಭವವಾಗಿರಲಿಲ್ಲ. ತಂದೆಯಿಲ್ಲದ ಸಂಸಾರದಲ್ಲಿ ವಿದ್ಯೆ ಕಲಿತ ಮೊದಲ ಮಗಳಾದ ರಮಾ ಹಿರಿದಾದ ಕರ್ತವ್ಯವೊಂದರಿಂದ ಬಿಗಿಯಲ್ಪಟ್ಟಿದ್ದಳು. ಇಪ್ಪತ್ತೊಂದು ವರ್ಷದ ಯುವತಿಯಾದ ಅವಳ ಮನಸ್ಸಿನಲ್ಲಿ ಬೇರೆ ಯಾವ ವಿಧವಾದ ಭಾವನೆಗಳಿಗೂ ಅವಕಾಶವಿರಲಿಲ್ಲ.”[2]

ಜವಾಬ್ದಾರಿಯುತವಾದ ಅವಳ ಜೀವನ ವಯೋಸಹಜವಾದ ಆಸೆ–ಆಕಾಂಕ್ಷೆಗಳನ್ನು ನೆನೆಸದೆ ಉದ್ಯೋಗವೇ ಮುಖ್ಯ ಎಂಬ ದೃಢವಾದ ನಿರ್ಧಾರ ಕೈಗೊಂಡಿರುತ್ತಾಳೆ. ಅದರಂತೆ ಹಲವಾರು ಕಡೆ ಉದ್ಯೋಗಕ್ಕಾಗಿ ಪ್ರಯತ್ನಪಡುತ್ತಾಳೆ. ಆಗ ಆಕೆಗೆ ಕೆಲಸ ಸಿಗುವ ಅವಕಾಶದ ಕೊರತೆ ಎಷ್ಟಿದೆ ಎಂಬುದು ಅರಿವಾಗಿ ತಾವು ಕೂಡ ವಿದ್ಯಾಲಯ ಸ್ಥಾಪನೆ ಮಾಡುವ ಆಲೋಚನೆ ಮಾಡಿದಾಗ ರಮಾಗೆ ನೆನಪಾದದ್ದು. ಹಿಂದಿನ ವರ್ಷ ವಿದ್ಯಾವಂತರಾದ ಅವಿವಾಹಿತ ಹೆಣ್ಣುಮಕ್ಕಳು ಚಾಮುಂಡಿಪುರಂನಲ್ಲಿ

ವಿದ್ಯಾಲಯ ಆರಂಭ ಮಾಡಿದಾಗ ಯಾರಾದರೊಬ್ಬರು ಕೂಡ ಈ ಶಾಲೆಗೆ ಸೇರಿಸಲಿಲ್ಲ. ಅನುಭವವಿಲ್ಲವೆಂಬ ಕಾರಣದ ಜೊತೆಗೆ ಅಪನಂಬಿಕೆಯಿಂದ ಮಕ್ಕಳು ಹಾಳಾಗುತ್ತಾರೆ ಎಂಬ ತಪ್ಪು ಕಲ್ಪನೆಗಳಿಂದ ದೂರ ಸರಿದರು. ಈ ರೀತಿಯ ಅಸಹಕಾರದಿಂದಲೇ ವಿದ್ಯಾವಂತರಾದ ಸ್ತ್ರೀಯರು ವಿದ್ಯಾಲಯವನ್ನು ಮುಚ್ಚಬೇಕಾಯಿತು. ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ ನೀಡದೆ ಎಲ್ಲರೂ ಅವಮಾನಿಸುವಲ್ಲೇ ನಿರತರಾದರು. ಇದರಿಂದ ನೊಂದ ಯುವತಿ ನಾವು ವೇಶ್ಯಾವಾಟಿಕೆ ಗೃಹಗಳನ್ನು ಸ್ಥಾಪಿಸುತ್ತಿಲ್ಲ. ನಿಮ್ಮ ಮಕ್ಕಳು ನಮ್ಮಲ್ಲಿಗೆ ಬಂದು ಹಾಳಾಗಬೇಕಿಲ್ಲ ಎಂದು ಕೆರಳಿ ನುಡಿಯುವಷ್ಟರ ಮಟ್ಟಿಗೆ ಅಸಮಾಧಾನ ಬುಗಿಲೆದ್ದಿತ್ತು. ಆದರೆ ಅಸಹಾಯಕ ಪರಿಸ್ಥಿತಿ ಅವರನ್ನು ಶೋಚನೀಯ ಸ್ಥಿತಿಗೆ ತಳ್ಳಿತ್ತು.

"ಅವಿವಾಹಿತ ವಿದ್ಯಾವಂತ ತರುಣಿಯರ ಸ್ಥಿತಿ ಒಂದಲ್ಲ ಒಂದು ರೀತಿಯಿಂದ ತುಂಬಾ ಶೋಚನೀಯವಾಗಿತ್ತು. ರಮೆಯಂತೆಯೇ ಮನೆಗೆ ಸಹಾಯ ಮಾಡುವ ಸಲುವಾಗಿ ಅವಿವಾಹಿತರಾಗಿ ಉಳಿದವರು ಹಲವರು, ಸರಿಯಾದ ವರ ದೊರಕದೆ ಕುಮಾರಿಯರಾಗಿಯೇ ಉಳಿದವರು ಕೆಲವರು. ಮನೆಯಲ್ಲಿ ಕಾಲ ಕಳೆಯಲು ಬೇಸರವಾಗಿ ಕೊನೆಗೆ ತಮ್ಮ 'ಪಾಕೆಟ್ ಮನಿ' ಯನ್ನಾದರೂ ಸಂಪಾದಿಸೋಣವೆಂದು ಕೆಲವರು ಹೀಗೆ ನಾನಾ ರೀತಿಯಾಗಿ ಅವರ ಜೀವನ ಕವಲೊಡೆದಿದ್ದವು."[3]

ವಿದ್ಯಾವಂತ ಹುಡುಗಿಯರನ್ನು ನೋಡುವ ದೃಷ್ಟಿಕೋನ ಸಹ್ಯವಾಗಿರಲಿಲ್ಲ. ಹೆಚ್ಚು ಕಲಿತವರು ಉತ್ತಮ ನಡವಳಿಕೆಯಿಂದ ಇರುವುದಿಲ್ಲವೆಂಬ ತಪ್ಪುಗ್ರಹಿಕೆ. ಉದ್ಯೋಗಕ್ಕೆ ಹೋಗುವವರನ್ನು ಕೀಳಾಗಿ ನೋಡುವಂತಹ ಪೂರ್ವಾಗ್ರಹಪೀಡಿತ ಮನಸ್ಥಿತಿಯುಳ್ಳವರಿಂದ ಸ್ತ್ರೀಯರು ಸಮಾಜದಿಂದ ಕಡೆಗಣಿಸಲ್ಪಟ್ಟಿದ್ದರು. ವರನ ಕಡೆಯವರು ಉದ್ಯೋಗದಲ್ಲಿರುವ ವಧುವನ್ನು ಒಪ್ಪುವುದಿಲ್ಲವೆಂಬ ಕಾರಣಕ್ಕೆ ಮನೆಗಳಲ್ಲಿ ತಮ್ಮ ಹೆಣ್ಣುಮಕ್ಕಳು ಕೆಲಸ ಮಾಡುವುದನ್ನು ಯಾರು ಕೂಡ ಸಹಿಸುತ್ತಿರಲಿಲ್ಲ. ಆದರೆ ರಮಾ ಮನೆಯ ಪರಿಸ್ಥಿತಿಯ ಕಾರಣಕ್ಕಾಗಿ ಉದ್ಯೋಗದ ಅನಿವಾರ್ಯತೆಯಿಂದ ಆಕೆಯ ತಾಯಿ ಮನದಲ್ಲಿ ಅಳುಕಿನಿಂದಲೆ ಒಪ್ಪಿದ್ದರು. ಆಗಾಗ ನೊಂದು ನಿನ್ನನ್ನು ದುಡಿಯುವುದಕ್ಕೆ ಕಳುಹಿಸಬೇಕಲ್ಲ ಎಂದು ನುಡಿಯುತ್ತಿದ್ದರು. ಸ್ತ್ರೀ ಸಬಲೀಕರಣಕ್ಕೆ ಎಲ್ಲ ಕಡೆಯಿಂದಲೂ ಅಡೆತಡೆಗಳು ಇದ್ದೇ ಇತ್ತು. ಇದನ್ನೆಲ್ಲಾ ಮೀರಿ ರಮಾ ಒಂದು ಶಿಶುವಿಹಾರದಲ್ಲಿ ಉದ್ಯೋಗ ಗಳಿಸಿ, ಬಿಡುವಿನ ಸಮಯದಲ್ಲಿ ಎರಡು ಮನೆಗಳಿಗೆ ತೆರಳಿ ಮನೆಪಾಠವನ್ನು ಹೇಳಿಕೊಡುವಂತಹ ಕೆಲಸವನ್ನು ನಿರ್ವಹಿಸುತ್ತಾಳೆ. ಆ ನಂತರ ಕರ್ನಾಟಕ ಟ್ಯುಟೋರಿಯಲ್ ಇನ್ಸಿಟ್ಯೂಟ್ ಎಂಬ ಕೋಚಿಂಗ್ ಸ್ಕೂಲ್‌ನಲ್ಲಿ ಉಪಾಧ್ಯಾಯಿನಿಯಾಗಿ ಕೆಲಸಕ್ಕೆ ಸೇರಿ ಹಲವಾರು ಉಪಾಧ್ಯಾಯರ ನಡುವೆ ಏಕೈಕ ಮಹಿಳಾ ಶಿಕ್ಷಕಿಯಾಗಿ ಅನೇಕ ತೊಂದರೆಗಳ ನಡುವೆಯೂ ಕುಟುಂಬಕ್ಕಾಗಿ ಕಾರ್ಯಪ್ರವೃತ್ತಳಾಗಿರುತ್ತಾಳೆ. ಅಲ್ಲಿದ್ದಂತಹ ನಾಗೇಂದ್ರನೊಡನೆ ಪ್ರೇಮಾಂಕುರವಾದರೂ ಸಹ ಆಕೆ ಕುಟುಂಬದ ಜವಾಬ್ದಾರಿಯನ್ನು ನೆನೆದು ತನ್ನ ಆಶಾಗೋಪುರವನ್ನು ಕಳಚಿ ಚಿಕ್ಕಮಗಳೂರಿನ ಕಾಫಿ ಪ್ಲಾಂಟೇಷನ್ ಒಡೆಯರಾದ ಸೂರ್ಯನಾರಾಯಣ ಎಂಬ ಕುರುಡ ವ್ಯಕ್ತಿಯನ್ನು ವಿವಾಹವಾಗುತ್ತಾಳೆ. ಶ್ರೀಮಂತರು ಎಂಬ ಕಾರಣಕ್ಕೆ, ತಮ್ಮ ಮನೆಯ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಬಹುದು ಎಂಬುದಕ್ಕಾಗಿ ತ್ಯಾಗಮನೋಭಾವದಿಂದ ನಡೆದುಕೊಳ್ಳುತ್ತಾಳೆ. ಸಹೋದರರು–ಸಹೋದರಿಯರ ಜೀವನಕ್ಕಾಗಿ ಶ್ರಮಿಸಿದ ಅವಳ ನಡೆ ಮಾದರಿಯಾದುದು. ವಿದ್ಯಾವತಿಯರಾದ ಸ್ತ್ರೀಯರು ತಪ್ಪುದಾರಿ ಹಿಡಿಯುತ್ತಾರೆ ಎಂಬ ಕೆಟ್ಟ ಪರಿಕಲ್ಪನೆಗಳಿಗೆ ವಿರುದ್ಧವಾದ ಪಾತ್ರವಾಗಿ ರಮೆಯ

ಜೀವನ ಚಿತ್ರಿತವಾಗಿದೆ ಕುಟುಂಬದ ಏಳಿಗೆಗಾಗಿ ತನ್ನ ಜೀವನವನ್ನೇ ಬೇರೆ ದಾರಿಯೆಡೆಗೆ ಸಾಗಿಸಿ ಎಲ್ಲರ ಜೀವನ ರೂಪಿಸಿದ ಮೌಲ್ಯಯುತ ಪಾತ್ರವಾಗಿ ವಿದ್ಯಾವಂತ ಮಹಿಳೆ ಇಲ್ಲಿ ಮೂಡಿಬಂದಿದ್ದಾಳೆ.

ತ್ರಿವೇಣಿಯವರ ಕಾದಂಬರಿಗಳಲ್ಲಿ ಮಹಿಳಾ ಸಬಲೀಕರಣದ ಜೊತೆಗೆ ಅದಕ್ಕೆ ಅಗತ್ಯವಾದ ಪೂರಕವಾದ ಅಂಶಗಳು ಮತ್ತು ಅದಕ್ಕೆ ವಿರುದ್ಧವಾದ ಅನಿಷ್ಟ ಪದ್ಧತಿಗಳ ವಿರೋಧ ಮುಂತಾದವುಗಳ ಬಗ್ಗೆ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಇಂತಹ ಕಾದಂಬರಿಗಳಲ್ಲಿ 'ಹಣ್ಣೆಲೆ ಚಿಗುರಿದಾಗ' ಕೃತಿಯು ಪ್ರಮುಖವಾದುದು. ಇಲ್ಲಿನ ರಾಯರ ಪಾತ್ರ ವಿದ್ಯಾವಂತರಾದರೂ ಕೂಡ ಸಂಪ್ರದಾಯದ ಹೆಸರಿನಲ್ಲಿ ಅಪ್ರಬುದ್ಧತೆಯುಳ್ಳವರಾಗಿರುತ್ತಾರೆ. ಗಂಡು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದ್ದರೂ ಮಗಳಿಗೆ ಮಾತ್ರ ಕಾಲೇಜು ಶಿಕ್ಷಣ ನಿಲ್ಲಿಸಿ ಮದುವೆ ಮಾಡುತ್ತಾರೆ. ಆದರೆ ಆಕೆ ಪತಿಯ ಮನೆಯನ್ನು ಸೇರುವ ಮೊದಲೇ ಪತಿ ವಿಯೋಗವಾಗಿ ತವರು ಮನೆಯಲ್ಲೇ ಉಳಿಯುತ್ತಾಳೆ. ವಿಧವೆಯಾದ ಈಕೆಗೆ ಶಿಕ್ಷಣ ಕೊಡಿಸಬೇಕೆಂಬುದು ಸಹೋದರರ ಆಲೋಚನೆಯಾದರೆ ರಾಯರು ಇದಕ್ಕೆ ಆಕ್ಷೇಪಣೆ ವ್ಯಕ್ತಪಡಿಸುತ್ತಾರೆ. ದುಃಖಿತರಾಗಿ ಇಷ್ಟೊಂದು ಮಂದಿ ಸಹೋದರರಿದ್ದೂ ನಿನ್ನನ್ನು ಸಾಕಲಾರದೆ ಕಾಲೇಜಿಗೆ ಸೇರಿಸಲು ನಿರ್ಧರಿಸಿದ್ದಾರೆ. ಗೃಹಿಣಿಯಾಗಿ ಬಾಳು ಬೆಳಕಾಗಿರಬೇಕಾದ ನಿನ್ನನ್ನು ಕಾಲೇಜು ಯುವತಿಯಾಗಿ ನೋಡಬೇಕಿಲ್ಲ ಎಂದು ವ್ಯಥೆ ಪಡುತ್ತಾರೆ. ಇದು ಅವರ ವಿದ್ಯಾವಂತಿಕೆಗೆ ವಿರುದ್ಧವಾದುದು. ಅರ್ಥಮಾಡಿಕೊಳ್ಳದ ಅವರ ಮನಸ್ಥಿತಿಯ ಸನ್ನಿವೇಶ ಒದಗಿ ಬಂದಿರುವುದು ದುರದೃಷ್ಟವಾದ ಸಂಗತಿಯೆಂದೇ ಭಾವಿಸಬಹುದು.

ಈ ರೀತಿಯ ಪರಿಸ್ಥಿತಿಗಳನ್ನು ಮೀರಿದ ಶಕ್ತಿ ಇರುವುದು ಶಿಕ್ಷಣಕ್ಕೆ ಕಾಲೇಜಿಗೆ ಸೇರಿದ ಮಾಲತಿ ತನ್ನ ಹಳೆಯ ನೋವನ್ನೆಲ್ಲಾ ಮರೆತು ಹೊಸ ಆಸೆ ಚಿಗುರುವ ಕನಸು ಕಾಣತೊಡಗಿದಳು. ತಾನು ವಿದ್ಯಾವಂತಳಾಗಿ ಉದ್ಯೋಗ ಗಳಿಸಿ ಅಸಹಾಯಕರಾದ ಸ್ತ್ರೀಯರಿಗೆ ಸಹಾಯ ಹಸ್ತ ನೀಡುವ ಆತ್ಮವಿಶ್ವಾಸ, ಆತ್ಮಸ್ಥೈರ್ಯ ಬೆಳೆದಿತ್ತು. ತನ್ನ ಬಗ್ಗೆ ಜಿಗುಪ್ಸೆ ಹೊಂದಿ ಕಣ್ಣೀರಿಡುತ್ತಿದ್ದ ಮಾಲತಿ ಕಾಲೇಜಿಗೆ ಸೇರಿದ ಮೇಲೆ ಆತ್ಮಾಭಿಮಾನ ಮನೆಮಾಡಿತ್ತು.

"ಮಾಲತಿ ಕಾಲೇಜಿನ ಜೀವನಕ್ಕೆ ಬಹುಬೇಗ ಒಗ್ಗಿಕೊಂಡಳೆಂಬುದು ರಾಯರಿಗೆ ತಿಳಿಯಿತು. ಯಾವಾಗಲು ಶೂನ್ಯದತ್ತ ನಿಟ್ಟಿಸಿ ನೋಡುತ್ತಿದ್ದ ಅವಳ ಕಣ್ಣುಗಳು ಈಗ ಹೆಚ್ಚಿನ ವ್ಯಾಸಂಗದ ನಿರೀಕ್ಷೆಯಿಂದ ಹೆಚ್ಚು ಹೊಳಪುಗೊಂಡಿರುವುದನ್ನು ರಾಯರು ಗಮನಿಸಿದರು. ಉಡಿಗೆ ತೊಡಿಗೆ, ಅಲಂಕಾರದಲ್ಲಿದ್ದ ಔದಸೀನ್ಯ ಮರೆಯಾಗಿ ಈಗ ಮಾಲತಿ ನಾಲ್ಕು ಜನರಂತೆ ಬದುಕಲು ಪ್ರಯತ್ನಿಸುತ್ತಿದ್ದಳು. ಹಿಂದಾದುದನ್ನು ನೆನೆದು ದುಃಖಿಸುತ್ತಾ ಕುಳಿತುಕೊಳ್ಳುವುದಕ್ಕಿಂತಲೂ ಆದದ್ದು ಆಗಿ ಹೋಯಿತು. ಈಗ ಕಲಿಯಬೇಕು ಎನ್ನುವ ಕೆಚ್ಚು ಅವಳಲ್ಲಿ ಒಡೆದು ಮೂಡತೊಡಗಿತು. ಎಳೆಯ ಸಸಿಗೆ ಯಾವ ನೆಲದಲ್ಲಿ ಬೇರು ಬಿಡುವುದೂ ಕಷ್ಟವಾಗುವುದಿಲ್ಲ."[4]

ಮಾಲತಿಯ ಮನದಲ್ಲಿ ಇಷ್ಟರಮಟ್ಟಿಗೆ ಉತ್ತಮವಾದ ಜೀವನದ ಪರಿಕಲ್ಪನೆ ಒಡಮೂಡಲು ಶಿಕ್ಷಣವೇ ಕಾರಣವಾದುದು. ಅವಳಲ್ಲಿದ್ದ ಸಂಕೋಚ, ಭಯ ದೂರವಾಗಿ ಬಾಳಿನಲ್ಲಿ ಆಶಾಕಿರಣ ಮೂಡಿತು. ಸಹೋದರನ ಕವಿತೆಗಳನ್ನು ಈ ಮೊದಲು ಕೂಡ ಆಲಿಸುತ್ತಿದ್ದ ಈಕೆ ಕಾಲೇಜು ಸೇರಿದ

ಮೇಲೆ ಆ ಕವಿತೆಗಳಿಗೆ ವಿಮರ್ಶನ ಮಾಡುವ ಮಟ್ಟಕ್ಕೆ ಪ್ರಬುದ್ಧತೆ ಬಂದಿತ್ತು. ಎಲ್ಲವನ್ನು ಒಪ್ಪಿಕೊಳ್ಳದೆ ತರ್ಕಿಸಿ ನಿರ್ಧಾರ ತೆಗೆದುಕೊಳ್ಳುತ್ತಿದ್ದಳು. ತನ್ನ ಸಹೋದರ ಅಂತರ್ಜಾತಿ ವಿವಾಹವಾಗುತ್ತೇನೆಂದು ಹೇಳಿದಾಗ ರಾಯರು ಒಪ್ಪುವುದಿಲ್ಲ. ಆಗ ಅವನು ಪ್ರತಿಭಟಿಸುತ್ತಾನೆ. ಆದರೆ ಮಾಲತಿ ಈ ವಿವಾಹಕ್ಕೆ ಒಪ್ಪಿಗೆ ಸೂಚಿಸುವುದರ ಜೊತೆಗೆ ತಂದೆಯ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸುವುದಿಲ್ಲ. "ರಾಯರು ಬೆಳೆದು ಬಂದಿರುವ ಕಾಲವನ್ನು ಪರಿಗಣಿಸಿದಾಗ, ತಮ್ಮ ಇಳಿವಯಸ್ಸಿನಲ್ಲಿ ಅವರಿಂದ ಸಂಪೂರ್ಣ ಬದಲಾವಣೆಯನ್ನು ಅಪೇಕ್ಷಿಸುವುದು ಸಕಾರಣವಲ್ಲ ಎಂದು ಅವಳು ತನ್ನ ಸಹೋದರನನ್ನು ಸಮಾಧಾನ ಮಾಡುತ್ತಾಳೆ. ಅವಳ ಅಣ್ಣನ ನೇರ ಪ್ರತಿಭಟನೆಗಿಂತ ಅವಳ ವಿಧೇಯತೆ ಈ ಸಂದರ್ಭದಲ್ಲಿ ಹೆಚ್ಚು ಪರಿಣಾಮಕಾರಿಯಾಗುತ್ತದೆ."[5] ಸಹೋದರನ ವಿವಾಹಕ್ಕೂ ತಂದೆಯ ಮಾತಿನಂತೆ ಹೋಗುವುದಿಲ್ಲವಾದರೂ ಆ ವಿವಾಹಕ್ಕೆ ಪ್ರೋತ್ಸಾಹ ನೀಡಿರುತ್ತಾಳೆ. ಇಂತಹ ಪ್ರಬುದ್ಧತೆಯ ಚಿಂತನೆ ಅವಳಲ್ಲಿ ಬೇರೂರಲು ಶಿಕ್ಷಣ ಸಹಕಾರಿಯಾದುದು. ಪದವಿ ಪರೀಕ್ಷೆ ಮುಗಿಸಿ ಉದ್ಯೋಗ ಸೇರಬಯಸಿದರೂ ತಂದೆಯ ಆಕ್ಷೇಪದಿಂದಾಗಿ ಮೌನವಾದಳು. ಮುಂದೆ ವಿಧುರನಾದ ಕೃಷ್ಣ ಪ್ರಸಾದ್‌ನನ್ನು ಮನಸಾರೆ ಪ್ರೇಮಿಸುವಳು. ಸಹೋದರೆಲ್ಲರೂ ವಿಧವಾ ವಿವಾಹಕ್ಕೆ ಪ್ರೋತ್ಸಾಹಿಸಿದರೂ ಸಹ ತಂದೆಯ ಮಾತಿಗೆ ವಿರುದ್ಧವಾಗಿ ನಡೆದುಕೊಳ್ಳಲಾರೆ ಎಂದು ಹೇಳುವ ಮೂಲಕ ವಿಧೇಯತೆಯಿಂದ ನಡೆದುಕೊಳ್ಳುತ್ತಾಳೆ. ವಿದ್ಯೆಯ ಅರಿವು, ವಿನಯತೆ, ಅವಳಲ್ಲಿದ್ದ ಸದ್ಗುಣ, ಉದಾರ ಮನೋಭಾವವನ್ನು ಸಾದರಪಡಿಸಿದ ಆಕೆಯ ವ್ಯಕ್ತಿತ್ವ ಪೂರ್ವಾಗ್ರಹ ಪೀಡಿತರಾದ ರಾಯರ ಮನಸನ್ನೇ ಗೆಲ್ಲುತ್ತದೆ. ಸಂಪ್ರದಾಯದ ಕಟ್ಟಳೆಗೆ ಸಿಲುಕಿ ನಲುಗಬೇಕಾಗಿದ್ದ ಜೀವನ ರಾಯರ ಒಪ್ಪಿಗೆಯಿಂದ ಮಾಲತಿಯ ವಿಧವಾ ವಿವಾಹ ನಡೆದು ಸಮಾಜಕ್ಕೆ ಉತ್ತಮ ಸಂದೇಶ ರವಾನೆಯಾಗಿದೆ.

**ಉಪಸಂಹಾರ**

ತ್ರಿವೇಣಿಯವರ ಕಾದಂಬರಿಗಳಲ್ಲಿ ಮಹಿಳಾ ಸಬಲೀಕರಣದ ಅಂಶಗಳು ವ್ಯಾಪಕವಾಗಿ ಮೂಡಿಬರಲು ಅಂದಿನ ಸಮಾಜದ ರೀತಿ ನೀತಿಗಳು ಕಾರಣವಾಗಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಶ್ರೀಮಂತ ಮನೆತನದ ಕೆಲವು ಯುವತಿಯರು ಮಾತ್ರವೇ ಶಿಕ್ಷಣ ಪಡೆಯಲು ಸಾಧ್ಯವಾಗಿತ್ತು. ದಮನಿತರು ಶಿಕ್ಷಣ, ಉದ್ಯೋಗದಿಂದ ಅವಕಾಶ ವಂಚಿತರಾಗಿದ್ದರು. ಹಿರಿಯರ ದೃಷ್ಟಿಯಿಂದ ಶಿಕ್ಷಣ ಪಡೆದ ಯುವತಿಯರು ತಪ್ಪು ಹಾದಿ ಹಿಡಿಯಬಹುದು. ಅವಿವಾಹಿತರಾಗಿ ಉಳಿಯಬಹುದು ಎಂಬುದರ ಜೊತೆಗೆ ಉದ್ಯೋಗದಲ್ಲಿದ್ದವರನ್ನು ಸಮಾಜ ನಡೆಸಿಕೊಳ್ಳುವ ರೀತಿಯ ಬಗ್ಗೆ ಇದ್ದ ಭಯ ಮತ್ತು ಸ್ತ್ರೀಯರಿಗೆ ಶಿಕ್ಷಣ, ಉದ್ಯೋಗ ವ್ಯರ್ಥ ಎಂಬಂತಹ ಆಲೋಚನೆಗಳಿಂದಾಗಿ ಸ್ತ್ರೀಸಬಲೀಕರಣ ಸಾಧ್ಯವಾಗುತ್ತಿರಲಿಲ್ಲ. ಇಂತಹ ವಿಚಾರಗಳನ್ನು ತ್ರಿವೇಣಿಯವರು ತಮ್ಮ ಕಾದಂಬರಿಗಳಲ್ಲಿ ಪ್ರಸ್ತಾಪಿಸುವುದರ ಜೊತೆಗೆ ಅವುಗಳನ್ನು ಮೀರಿ ನಡೆದು ಶಿಕ್ಷಣ ಮತ್ತು ಉದ್ಯೋಗ ಗಳಿಸಿ ಸಮಾಜಕ್ಕೆ ಮಾದರಿಯಾದ ಪಾತ್ರಗಳನ್ನು ಚಿತ್ರಿಸಿದರು. ಇಲ್ಲಿ ಮೂಡಿಬಂದಿರುವ ಪಾತ್ರಗಳು ಉಪಧ್ಯಾಯಿನಿ, ವೈದ್ಯ, ಟೈಪಿಸ್ಟ್, ಕಸೂತಿ ಕೆಲಸ ಮುಂತಾದ ಉದ್ಯೋಗಗಳಲ್ಲಿ ನಿರತರಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ, ನೈತಿಕವಾಗಿ ಸಬಲರಾಗಿ ಸಮಾಜಕ್ಕೆ ಉತ್ತಮವಾದ ಸಂದೇಶವನ್ನು ನೀಡುವಲ್ಲಿ ಯಶಸ್ವಿಯಾಗಿವೆ.

**ಕೊನೆಟಿಪ್ಪಣಿ**

1. ತ್ರಿವೇಣಿ. (2011). ಅಪಸ್ವರ ಅಪಜಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ಪು.ಸಂ. 229
2. ತ್ರಿವೇಣಿ. (2002). ಕಂಕಣ. ತ್ರಿವೇಣಿ ಎಂಟರ್‌ಪ್ರೈಸಸ್, ಮೈಸೂರು. ಪು.ಸಂ. 85
3. ಮೇಲಿನದೇ., ಪು.ಸಂ. 10
4. ತ್ರಿವೇಣಿ. (2014). ಹಣ್ಣೆಲೆ ಚಿಗುರಿದಾಗ. ಸಾಯಿಗೀತ ಪ್ರಕಾಶನ, ಮೈಸೂರು. ಪು.ಸಂ. 111
5. ರಾಮಚಂದ್ರನ್.ಸಿ.ಎಸ್. (1999). ತ್ರಿವೇಣಿ. ಸಾಹಿತ್ಯ ಅಕಾಡೆಮಿ, ನವದೆಹಲಿ. ಪು.ಸಂ. 60

**ಪರಾಮರ್ಶನ ಗ್ರಂಥಗಳು**


- ಮಹಾಬಲೇಶ್ವರರಾವ್. (2012). ಮಹಿಳಾ ಶಿಕ್ಷಣ. ಶ್ರುತಿಲೋಕ ಪ್ರಕಾಶನ, ಮೈಸೂರು.
- ನಾಗಮಣಿ ಎಸ್ ರಾವ್. (2012). ಸ್ತ್ರೀಪಥ. ನವಕರ್ನಾಟಕ ಪ್ರಕಾಶನ, ಬೆಂಗಳೂರು,
- ನಾಗರತ್ನ ವೆಂಕಟರಾಮಣ್ಣ. (2007). ತ್ರಿವೇಣಿ. ಚೇತನ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು.
- ತ್ರಿವೇಣಿ. (1994). ಮುಕ್ತಿ, ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು,
- ವೆಂಕಟೇಶ್ ಸಿ.ಡಿ. (2012). ಮಹಿಳೆ ಶಿಕ್ಷಣ ಮತ್ತು ಸಮಾಜ. ಅನ್ನದಾನಿ ಭೈರವ ಪ್ರಕಾಶನ, ಬೆಂಗಳೂರು.
- ಯಶೋಧಾ ಡಿ. (ಸಂ). (2016). ರೆಕ್ಕೆ ಬಿಚ್ಚಿ ಹಾರೋಣ. ಸದರ್ನ್ ಎಕಾನಾಮಿಸ್ಟ್ ಪಬ್ಲಿಕೇಷನ್, ಬೆಂಗಳೂರು.


IIMRD JOURNALS